ಹತ್ತಿ ಹೋದಳು. ಪಕ್ಕದ ಮನೆಯ ಟೆರೇಸ್ ಮೇಲೆ ಬಟ್ಟೆ ಒಣ ಹಾಕುತ್ತಿದ್ದ ಶಿವಮ್ಮಳಿಗೆ ಅಚಾನಕ್ಕಾಗಿ ಎದುರಾಗಿಬಿಟ್ಟಳು. ಕಸಿವಿಸಿಗೊಂಡ ಶಿವಮ್ಮ ತಲೆ ತಗ್ಗಿಸಿಕೊಂಡು ಕೆಳಗಿಳಿದಳು. ಸಾವಿತ್ರಿಯೂ ಸಿಗಬಾರದಿತ್ತೆಂದುಕೊಂಡಳು.

ಹೀಗೆ ಅನೇಕ ದಿನಗಳ ಕಣ್ಣಾಮುಚ್ಚಾಲೆ ನಡೆದಾದ ನಂತರ ಒಂದು ದಿನ ಸಾವಿತ್ರಿ ಆಫೀಸ್‌ಗೆ ತೆರಳಲು ಬಸ್ ಹಿಡಿಯಲು ಹೋಗುತ್ತಿದ್ದಳು. ಅನತಿ ದೂರದಲ್ಲಿ ಹಿಂದಿಂದೆ ಯಾವುದೋ ಹೆಣ್ಣೆಂಗಸು ಬರುತ್ತಿರುವ ಸದ್ದು ಕೇಳಿಸಿತು. ಸಾವಿತ್ರಿ ನೇರವಾಗಿ ನೋಡದಿದ್ದರೂ ಅದು ಉಟ್ಟಿರುವ ಬಣ್ಣದ ಸೀರೆ, ಬೀಸುತ್ತಿರುವ ಕೈ ವರಸೆ ಮೇಲೆ ಶಿವಮ್ಮಳೇ ಇರಬೇಕೆನಿಸಿತು. ಅವಳೇ ಎಂದು ಖಾತ್ರಿಯಾದ ನಂತರ ಮುಂದೊದಗುವ ಮುಜುಗರವನ್ನು ತಪ್ಪಿಸಿಕೊಳ್ಳಲು ಸಾವಿತ್ರಿ ತನ್ನ ವೇಗವನ್ನು ಹೆಚ್ಚಿಸಿಕೊಂಡು ನಡೆಯತೊಡಗಿದಳು. ವಿಚಿತ್ರವೆಂದರೆ ಈ ಬಾರಿ ಶಿವಮ್ಮಳೂ ಬಿರಿ ಬಿರಿನೆ ಕಾಲಾಕಿಕೊಂಡು ಸಾವಿತ್ರಿಯೆಡೆಗೆ ಧಾವಿಸಿ ಬರುತ್ತಿದ್ದಳು. ಸಾವಿತ್ರಿಗೆ ಶಿವಮ್ಮಳ ವೇಗ ಉದ್ದೇಶ ಪೂರ್ವಕವಾದುದೆಂದು ತಿಳಿದಾದ ನಂತರ ಸ್ಪರ್ಧೆ ಕೈಬಿಟ್ಟು ಮುಂದೊದಗಬಹುದನ್ನು ಯೋಚಿಸತೊಡಗಿದಳು.

ಹಿಂದಿಂದೆ ಬಂದವಳೆ ಶಿವಮ್ಮ, 'ಮೇಡಮ್ಮೋರೆ ಬೇಜಾರ್ ಮಾಡ್ಕಂಡ್ರ?' ಕೇಳಿದಳು. ತಡವರಿಸಿದ ಸಾವಿತ್ರಿ, 'ಯಾಕೆ ಬೇಜಾರ್ ಮಾಡ್ಕೆಣವ್ವ, ನಿಂಗೆ ನಾನೇನಾರ ಕೊಟ್ಟು ಬಿಟ್ಟಿದಿನ' ಅಂದಳು. 'ಅಂಗಲ್ಲ ಮೇಡಮ್ಮರೆ, ಬತ್ತಿನಿ ಅಂತ ಮಾತು ಕೊಟ್ಟು, ಬರಲಿಲ್ಲವಲ್ಲ ಅಂತ ಬೇಜಾರ್ ಮಾಡ್ಕೆಂಡ್ರೇನ ಅಂತ' ಈಗ ವರಸೆ ಬದಲಾಯಿಸಿದ ಸಾವಿತ್ರಿ, 'ಮತ್ತೆ ಆಗ್ದೆ ಇರುತ್ತೇನವ್ವ, ಬತ್ತಿನಿ ಅಂತ ಪಾತ್ರೆ ಈಚೆಗೆ ಇಕ್ಕೋದಳು ವಾರಾದ್ರು ಇಲ್ಲ, ಹದಿನೈದಿನಾದ್ರು ಇಲ್ಲ ಅಂದ್ರೆ ಹೆಂಗೆ ಕಾಣನ'. 'ಅದು ಅಲ್ದೆ ಪಕ್ಕದ ಗಂಗಮ್ಮಾಂಟಿ ಮನೆಯ ಬಾಣ್ತಿ ಮಗಿನ ಬಟ್ಟೆ ಒಗಿಯಾಕೆ ಬತ್ತಿದಿಯ, ನಾವೇನ್ಮಾಡಿದ್ದು ನಿಂಗೆ ಇಂಥ ದ್ರೋಹ ಮಾಡಿದ್ಯಲ್ಲ' ನೋವಿನಿಂದ ಅಂದಳು. ಧ್ವನಿ ತಗ್ಗಿಸಿದ ಶಿವಮ್ಮ, 'ಮೇಡಮ್ಮರೆ ಬೇಜಾರ್ ಮಾಡ್ಕ ಬ್ಯಾಡ್ರಿ, ನಿಮ್ ನೋವು ಏನು ಅಂತ ನನ್ಗೆ ಅರ್ಥಾಗುತ್ತೆ, ಆದ್ರೆ ನಾನೇನ್ಮಾಡ್ಲಿ ಹೇಳ್ರಿ?' ಎಂದಳು. 'ಅಂತದ್ದು ನಿನ್ಗೇನು ಬಂದ್ಯೆತಮ್ಮ?' ಕೇಳಿದಳು ಸಾವಿತ್ರಿ. 'ಮೇಡಮ್ಮರೆ ಏನ ಒಂದ್ ಕೇಳ್ತಿನಿ ಬೇಜಾರ್ ಮಾಡ್ಕ ಬ್ಯಾಡ್ರಿ' ಅಂದು, 'ನೀವು ನಮ್ಮರಂತೆ' ಅಂದಳು. ಶಿವಮ್ಮನ ಉತ್ತರ ರೂಪದ ಪ್ರಶ್ನೆ ಕಂಡು ವಿಚಲಿತಳಾದ ಸಾವಿತ್ರಿ ಅದೇನ್ ಬಿಡಿಸೇಳುವಂತೆ ಕೇಳಿದಳು. 'ಅಲ್ಲ ಮೇಡಮ್ಮರೆ ನೀವು ನಮ್ಜನವಂತೆ' ಎಂದು, 'ಈ ಊರಲ್ಲಿ ನಮ್ಜನಗುಳ ಮನೆನಲ್ಲಿ ಕೆಲ್ಸ ಮಾಡಿರೆ ಬೇರೆರು ಅವ್ರ ಮನೆ ಕೆಲ್ಸಕ್ಕೆ ಕರ್ಕಣಲ್ಲ. ನಮ್ಮರು ಅಲ್ಲೊಬ್ರು ಇಲ್ಲೊಬ್ರು ಕೆಲ್ಸಕ್ಕೆ ಕರಿತರೆ ಅಂತ ಹೋದ್ರೆ ಹತ್ತಾರು ಮನೆ ಕೆಲ್ಸ ಕಳ್ಕಬೇಕಾಗುತ್ತೆ, ಬೇರೆ ಜಾತಿರು ಅವ್ರವ ಹಳೆ ಬಟ್ಟೆ ಬರೆ ಎಲ್ಲ ಕೊಡ್ತರೆ, ಕೈತುಂಬ ಕಾಸ್ನು ಕೊಡ್ತರೆ, ಇದ್ನ ಬಿಟ್ರೆ ನಮ್ಮ ಮಕ್ಳು ಮರಿನ ಯಾರು ಸಾಕ್ತರೇಳ್ರಿ?' ಎಂದು ತನ್ನ ಅಳಲನ್ನ ತೋಡಿಕೊಂಡಳು. ಸಾವಿತ್ರಿಯ ಮುಖ ಗಂಭೀರವಾಯಿತು. ಮಾತು ಹೊರಡದಾಗಿ ನಿರುತ್ತರಳಾದಳು. ಶಿವಮ್ಮ, 'ಬತ್ತಿನಿ ಮೇಡಮ್ಮರೆ ಇನ್ನ ಎರಡು ಮನೆ ಕೆಲ್ಸ ಐತೆ' ಎಂದು ಮುಂದೆ ಮುಂದೆ ನಡದೇ ಬಿಟ್ಟಳು. ಸಾವಿತ್ರಿ ಆಫೀಸು ಮನೆ ಎಲ್ಲವನೂ ಮರೆತು ಶಿವಮ್ಮ ಅಂದ ಮಾತಿನಲ್ಲೆ ಲೀನಳಾದಳು.

**ಗುರುಪ್ರಸಾದ್ ಕಂಟಲಗೆರೆ**

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನವರು. ವೃತ್ತಿಯಲ್ಲಿ ಶಿಕ್ಷಕ. ಕತೆ ಕವಿತೆ ಆಸಕ್ತಿಯ ಕ್ಷೇತ್ರಗಳು. ಪ್ರಕಟಿತ ಪುಸ್ತಕಗಳು: 'ಗೋವಿನ ಜಾಡು' (ಕಥಾಸಂಕಲನ), 'ಕಪ್ಪು ಕೋಣಗಳು' (ಕವನ ಸಂಕಲನ), 'ದಲಿತ ಸಾಂಸ್ಕೃತಿಕ ಕಥನಗಳ ಅಧ್ಯಯನ' (ಸಂಶೋಧನೆ). 2019ರ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ'ಯಲ್ಲಿ ಅವರ ಕತೆಗೆ ಮೊದಲ ಬಹುಮಾನ ಬಂದಿದೆ.